# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

**ಸಂಖ್ಯೆ:ಎಸ್‌ಹೆಚ್‌ಕ್ಯೂ/ತ.1/ಹೆಚ್.ಡಬ್ಲ್ಯೂ.ಬಿ– 08/2026-27/** 881 **ದಿನಾಂಕ:06.08.2026**

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

ವಿಷಯ:- ಕಬ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಸ್ಕೌಟ್ ಮಾಸ್ಟರ್ಸ್/ಗೈಡ್ ಕ್ಯಾಪ್ಟನ್ಸ್ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ರವರುಗಳಿಗೆ **ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ)** ತರಬೇತಿ ಶಿಬಿರ ಆಯೋಜಿಸಿರುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಸ್ಕೌಟ್ ಮಾಸ್ಟರ್ಸ್/ಗೈಡ್ ಕ್ಯಾಪ್ಟನ್ಸ್/ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ರವರುಗಳಿಗೆ **ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ)** ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ತರಬೇತಿ ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರದ ಹೆಸರು | ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್/ಫ್ಲಾಕ್ ಲೀಡರ್ಸ್/ಸ್ಕೌಟ್ ಮಾಸ್ಟರ್ಸ್/ಗೈಡ್ ಕ್ಯಾಪ್ಟನ್ಸ್ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ರವರುಗಳಿಗೆ **ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ) ತರಬೇತಿ ಶಿಬಿರ** |
| **ಸ್ಥಳ** | **ಡಾ॥ ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.** |
| **ದಿನಾಂಕ** | **ದಿನಾಂಕ 12.10.2026 ರಿಂದ 18.10.2026ರವರೆಗೆ** |
| ಹಾಜರಾಗುವ ದಿನಾಂಕ | 12.10.2026ರ ಬೆಳಗ್ಗೆ 9.00 ಗಂಟೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದು. ತಡವಾಗಿ ಬಂದವರನ್ನು ಸೇರಿಸಲಾಗುವುದಿಲ್ಲ ಒಂದು ದಿನ ಮುಂಚಿತವಾಗಿ ಅಂದರೆ 11.10.2026ರಂದು ಸಂಜೆ ಬಂದು ವರದಿ ಮಾಡಿಕೊಳ್ಳಬಹುದು. (ಊಟದ ವ್ಯವಸ್ಥೆ ಮಾಡಲಾಗುತ್ತದೆ.) |
| ಬಿಡುಗಡೆ ದಿನಾಂಕ | 18.10.2026ರ ಸಂಜೆ 4.00 ಗಂಟೆಗೆ (ಇದರಂತೆ ಮರುಪ್ರಯಾಣದ ವ್ಯವಸ್ಥೆ ಮಾಡಿಕೊಳ್ಳುವುದು.) |
| * ಪ್ರತಿಯೊಬ್ಬರಿಗೆ ಶಿಬಿರದ ಶುಲ್ಕ ಹಾಗೂ ಶಿಬಿರದ ನೊಂದಾವಣಿ ಶುಲ್ಕ | **ಒಟ್ಟು ರೂ. 1200/-** (ನೊಂದಾವಣಿ ಶುಲ್ಕ ರೂ. 150/- +ಊಟೋಪಚಾರದ ವೆಚ್ಚ ದಿನ ಒಂದಕ್ಕೆ ರೂ. 150/-ರಂತೆ * 7 ದಿನಕ್ಕೆ ರೂ. 1050/- =1200/-) |
| * ಪ್ರತಿಯೊಬ್ಬರಿಗೆ ಸ್ಕೌಟ್ಸ್ /ಗೈಡ್ಸ್ ಮಾಸಪತ್ರಿಕೆ ಶುಲ್ಕ | ರೂ. 200/- |
| * ಪ್ರತಿಯೊಬ್ಬರಿಗೆ ದಳ ನವೀಕರಣ ಶುಲ್ಕ | ಕಬ್/ಫ್ಲಾಕ್ ಘಟಕಕ್ಕೆ ರೂ.98/-<br>ಸ್ಕೌಟ್/ಗೈಡ್ ಘಟಕಕ್ಕೆ ರೂ 242/-<br>ರೋವರ್/ರೇಂಜರ್ ಘಟಕಕ್ಕೆ ರೂ. 194/-<br>ಈಗಾಗಲೇ 2026-27ರ ಸಾಲಿನ ದಳ ನವೀಕರಣ ಶುಲ್ಕ ಕಟ್ಟಿದವರು ರಶೀದಿಯ ಜೆರಾಕ್ಸ್ ಪ್ರತಿಯನ್ನು ತರುವುದು. |
| ವಸತಿ | ರಾಜ್ಯ ಸಂಸ್ಥೆಯ ವತಿಯಿಂದ ವಸತಿ ವ್ಯವಸ್ಥೆ ಮಾಡಲಾಗುವುದು |
| ಪ್ರಯಾಣ ವೆಚ್ಚ | ಪ್ರತಿಯೊಬ್ಬರ, ಶಾಲೆಯಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಸಾಮಾನ್ಯ ಬಸ್ಸಿನ ನೈಜ ಪ್ರಯಾಣ ವೆಚ್ಚವನ್ನು ಹಾಗೂ ರೈಲ್ವೆ ಪ್ರಯಾಣಕ್ಕೆ ಅನುಕೂಲವಿದ್ದಲ್ಲಿ ರಿಯಾಯಿತಿ ದರದ ಪ್ರಯಾಣ ವೆಚ್ಚವನ್ನು ಆಯಾ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸುವುದು. |

ಪು.ತಿ.ನೋ

| | |
|---|---|
| ಯಾರು ಭಾಗವಹಿಸುವುದು | * **ಫ್ಲಾಕ್/ಗೈಡ್/ರೇಂಜರ್ ವಿಭಾಗ:**<br>1. ರಾಜ್ಯ ತರಬೇತಿ ಆಯುಕ್ತರು (ಗೈ)ರವರಿಂದ ಟ್ರೈನಿಂಗ್ ಸ್ಟಡಿ ಪ್ರಮಾಣ ಪತ್ರವನ್ನು ಪಡೆದಿರಬೇಕು. ಅರ್ಜಿಗೆ ಪಡೆದಿರುವ ಟ್ರೈನಿಂಗ್ ಸ್ಟಡಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.<br>**ಫ್ಲಾಕ್ ಲೀಡರ್‌ರವರು**–4 ಸುವರ್ಣ ಪಂಖ್ ಬುಲ್-ಬುಲ್ಸ್ ಪ್ರಮಾಣ ಪತ್ರ ಅಥವಾ 2 ಹೀರಕ್ ಪಂಕ್ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.<br>**ಗೈಡರ್‌ರವರು**– 6 ತೃತೀಯ ಸೋಪಾನ ಗೈಡ್ಸ್/ ಅಥವಾ 2 ರಾಜ್ಯ ಪುರಸ್ಕಾರ ಗೈಡ್ಸ್ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.<br>2. ತರಬೇತಿಗೆ ಹಾಜರಾಗುವ ಪೂರ್ವದಲ್ಲಿ Pre-Course Assignment ಪೂರ್ಯೆಸಿರಬೇಕು.<br>3. ಅರ್ಜಿದಾರರು ಚಾರ್ಟರ್ ಮತ್ತು ವಾರೆಂಟ್ ಹಾಗೂ ಯುನಿಟ್ ರನ್ನಿಂಗ್ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.<br>4. ಅರ್ಜಿದಾರರು ಖಡ್ಡಾಯವಾಗಿ UID No. Register ಮಾಡಿಸಿ ಅರ್ಜಿಯಲ್ಲಿ UID No. ನಮೂದಿಸಿರಬೇಕು. ಶಾಲಾ UID No. ಕೂಡ ನಮೂದಿಸುವುದು.<br>* **ಕಬ್/ಸ್ಕೌಟ್/ರೋವರ್ ವಿಭಾಗ:**<br>1. ಕಬ್ ಮಾಸ್ಟರ್/ಸ್ಕೌಟ್ ಮಾಸ್ಟರ್/ರೋವರ್ ಸ್ಕೌಟ್ ಲೀಡರ್ಸ್‌ಗಳು ಮುಂದುವರೆದ ತರಬೇತಿ ಹೊಂದಿ 12 ತಿಂಗಳು (1 ವರ್ಷ) ಪೂರ್ಯೆಸಿರಬೇಕು. ಅರ್ಜಿಗೆ ಜೆರಾಕ್ಸ್ ಪ್ರತಿ ಲಗತ್ತಿಸುವುದು ಖಡ್ಡಾಯ.<br>**ಸ್ಕೌಟ್ ವಿಭಾಗಕ್ಕೆ**<br>**1.ಈಗಾಗಲೇ ಜೂನ್ 2024ರೊಳಗೆ ರಾಜ್ಯ ಸಂಸ್ಥೆಯಿಂದ ಟ್ರೈನಿಂಗ್ ಸ್ಟಡಿ ಪ್ರಮಾಣ ಪತ್ರವನ್ನು ಪಡೆದವರು, ಪಡೆದ ಪ್ರಮಾಣ ಪತ್ರವನ್ನು ಅರ್ಜಿಗೆ ಲಗತ್ತಿಸುವುದು.**<br>**2.i)ಪಡೆಯದೇ ಇರುವವರು, ಈ ಸುತ್ತೋಲೆಗೆ ಲಗತ್ತಿಸಿದ ಹೊಸ ಟ್ರೈನಿಂಗ್ ಸ್ಟಡಿ (ಈಗ ಇದು ಪ್ರೀ–ಕೋರ್ಸ್ ಸ್ಟಡಿ ಪ್ರಶ್ನಾವಳಿ) ಪ್ರಶ್ನಾವಳಿಗೆ ಟಿಪ್ಪಣಿ ಪುಸ್ತಕದಲ್ಲಿ ಉತ್ತರಿಸಿ, ಅರ್ಹ ಅರ್ಜಿದಾರರು ಹೆಚ್.ಡಬ್ಲ್ಯೂ.ಬಿ (ಸ್ಕೌಟ್ ವಿಭಾಗ) ತರಬೇತಿಗೆ ಹಾಜರಾಗಿ ನೊಂದಣಿ ಮಾಡುವ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರು(ಸ್ಕೌಟ್) ಹಾಗೂ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಇವರ ಶಿಫಾರಸ್ಸು ಸಹಿಯೊಂದಿಗೆ ಟಿಪ್ಪಣಿ ಪುಸ್ತಕ ಒಪ್ಪಿಸುವುದು.**<br>**ii)ಇದರಂತೆ ಈ ಸುತ್ತೋಲೆಗೆ ಲಗತ್ತಿಸಿದ ಟ್ರೈನಿಂಗ್ ಅಸ್ಯೆನ್‌ಮೆಂಟ್ ಪ್ರಶ್ನಾವಳಿ ಟಿಪ್ಪಣಿ ಪುಸ್ತಕದಲ್ಲಿ ಉತ್ತರಿಸಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಇವರಿಗೆ ಒಪ್ಪಿಸಿ ಅವರಿಂದ ಇದಕ್ಕೆ ಲಗತ್ತಿಸಿದ ಮಾದರಿಯಲ್ಲಿ ಟ್ರೈನಿಂಗ್ ಅಸ್ಯೆನ್‌ಮೆಂಟ್ ಪೂರ್ಯೆಸಿದ ಪ್ರಮಾಣ ಪತ್ರವನ್ನು ಪಡೆದು ಅರ್ಜಿದಾರರು ತಮ್ಮ, ತಮ್ಮ ಅರ್ಜಿಗಳಿಗೆ ಲಗತ್ತಿಸಬೇಕು. ಅರ್ಜಿ ಕಳುಹಿಸುವುದು. (ಇದು ಖಡ್ಡಾಯ ಮತ್ತು ಈ ರೀತಿ ಮಾಡದವರಿಗೆ ಹೆಚ್.ಡಬ್ಲ್ಯೂ.ಬಿ ತರಬೇತಿಗೆ ಅರ್ಹತೆ ಸಿಗುವುದಿಲ್ಲ) ಸರ್ಟಿಫೀಕೆಟ್ ನಮೂನೆ ಈ ಸುತ್ತೋಲೆಗೆ ಲಗತ್ತಿಸಿದೆ.**<br>3. **ಕಬ್ ಮಾಸ್ಟರ್‌ರವರು** – 2 ತೃತಿಯ ಚರಣ್ ಕಬ್ಸ್ ಪ್ರಮಾಣ ಪತ್ರ ಅಥವಾ 2 ಚತುರ್ಥಚರಣ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಮತ್ತು<br>4. **ಸ್ಕೌಟ್ ಮಾಸ್ಟರ್‌ರವರು** – 4 ತೃತೀಯ ಸೋಪಾನ್ ಸ್ಕೌಟ್ಸ್ ಅಥವಾ 2 ರಾಜ್ಯಪುರಸ್ಕಾರ ಸ್ಕೌಟ್ ಪ್ರಮಾಣ ಪತ್ರ ಮತ್ತು<br>5. ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ಸ್ ತಮ್ಮ ತಂಡದ – 4 ನಿಪುಣ್ ಅಥವಾ 2 ರಾಜ್ಯ ಪುರಸ್ಕಾರ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು.<br>6. ಅರ್ಜಿದಾರರು ಚಾರ್ಟರ್ ಮತ್ತು ವಾರೆಂಟ್ ಹಾಗೂ ಯುನಿಟ್ ರನ್ನಿಂಗ್ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.<br>7. ಅರ್ಜಿದಾರರು ಖಡ್ಡಾಯವಾಗಿ UID No. Register ಮಾಡಿಸಿ |

ಪು.ತಿ.ನೋ

| | |
|---|---|
| | ಅರ್ಜಿಯಲ್ಲಿ UID No. ನಮೂದಿಸಿರಬೇಕು. ಶಾಲಾ UID No. ಕೂಡ ನಮೂದಿಸುವುದು ಹಾಗೂ ಇ-ಮೇಲ್ ಐಡಿ ನಮೂದಿಸಿರಬೇಕು. |
| ತರಬೇಕಾದ ವಸ್ತುಗಳು | ಸರಿಯಾದ ಸಂಪೂರ್ಣ ಸಮವಸ್ತ್ರ, ಅಡ್ವಾನ್ಸ ಕೋರ್ಸ್ ಪ್ರಮಾಣ ಪತ್ರ, ಸ್ಕೌಟಿಂಗ್-ಗೈಡಿಂಗ್‌ನ ಆಯಾ ವಿಭಾಗ (Section)ದವರು ಆಯಾ ವಿಭಾಗಕ್ಕೆ ಸಂಬಂಧಿಸಿದ ಪುಸ್ತಕಗಳಾದ ಎ.ಪಿ.ಆರ್.ಓ ಭಾಗ-1,2,3, ಸ್ಕೌಟಿಂಗ್ ಫಾರ್ ಬಾಯ್ಸ್, ರೋವರಿಂಗ್ ಇನ್ ಟು ಸಕ್ಸೆಸ್, ಗರ್ಲ್ ಗೈಡಿಂಗ್ ಇನ್ ಇಂಡಿಯಾ, ಗರ್ಲ್ ಗೈಡ್ ಮಾರ್ಗದರ್ಶಿ, ಫ್ಲಾಕ್ ವಿಭಾಗದವರ (Flock Leader Hand Book) (ಹಿಂಡಿನ ನಾಯಕಿಯವರ ಕೈಪಿಡಿ), 200 ಪೇಜ್ ನೋಟ್ ಪುಸ್ತಕ, ಪೆನ್, ಪೆನ್ಸಿಲ್, ಡ್ರಾಯಿಂಗ್ ಶೀಟ್ಸ್, 10 ಬಿಳಿ ಹಾಳೆ, ಕಲರ್ ಪೆನ್ಸೀಲ್, ಕ್ರಾಫ್ಟ್ ಸಲಕರಣೆಗಳು, ಛತ್ರಿ, ರೈನ್ ಕೋಟ್, ಲಘು ಹಾಸಿಗೆ, ವಿಪ್ಪಿಂಗ್ ಮಾಡಿದ 3 ಮೀಟರ್ ಬಿಳಿ ನೂಲಿನ ಹಗ್ಗ, ತಟ್ಟೆ ಲೋಟ, ಒಡೋಮಸ್, ಟಾರ್ಚ್, ಸೂಜಿದಾರ, ಬದಲಾಯಿಸಲು ಉಡುಪು, ಟಾಯ್ಲೆಟ್ ಕಿಟ್, ವೈಯಕ್ತಿಕ ಔಷಧಿ ಹಾಗೂ ಶಿಬಿರಾಗ್ನಿಗೆ ಬೇಕಾದ ವೇಷ-ಭೂಷಣಗಳು, ಸಲಕರಣಗಳು ಮತ್ತು ಬದಲಿ ಉಡುಪುಗಳು. |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಜಿಲ್ಲೆಯ, ಜಿಲ್ಲಾ ಕಾರ್ಯದರ್ಶಿಗಳ ಮಾರ್ಗದರ್ಶನದಲ್ಲಿ ಎಲ್ಲಾ ಡಿ.ಟಿ.ಸಿ/ಎ.ಎಸ್.ಓ.ಸಿ/ಡಿ.ಒ/ಎಸ್.ಜಿ.ವಿರವರು ಕ್ರಮ ಕೈಗೊಂಡು **ದಿನಾಂಕ 10.09.2026**ರ ಒಳಗಾಗಿ, ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಮೇಲೆ ತಿಳಿಸಿದ ಎಲ್ಲಾ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ರಾಜ್ಯ ಸಂಸ್ಥೆಗೆ ಅರ್ಜಿಯನ್ನು ದ್ವಿಪ್ರತಿ (ಎರಡು ಪ್ರತಿ)ಯಲ್ಲಿ ಕಳುಹಿಸಬೇಕಾಗಿ ತಿಳಿಸಿದೆ. |
| ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ | ಕಚೇರಿ ದೂರವಾಣಿ ಸಂಖ್ಯೆ: 080-22267470<br>ಶ್ರೀಮತಿ ಕೆ.ವಿ.ಶಾಮಲ, ರಾ.ತ.ಆ(ಗೈ)-9980237570<br>ಶ್ರೀ ನಾಗೇಶ್ ಆರ್. ಶಿವಪೂರ್, ರಾ.ತ.ಆ(ಸ್ಕೌ)- 9731854272, |

**ಶಿಬಿರದ ಶುಲ್ಕ, ಶಿಬಿರ ನೊಂದಾವಣಿ ಶುಲ್ಕ, ದಳ ನವೀಕರಣ ಶುಲ್ಕ, ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣ ಮತ್ತು ಶಾಲೆಯಿಂದ ಶಿಬಿರ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚ, ಆಯಾ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ, ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.**

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಅರ್ಜಿಗಳನ್ನು ಕಡೆಯ ದಿನಾಂಕದೊಳಗಾಗಿ(10.09.2026) ರಾಜ್ಯ ಸಂಸ್ಥೆಗೆ ಕಳುಹಿಸಲು ಕೋರಿದೆ. **ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಪ್ರತಿಯನ್ನು ಮಾಹಿತಿ ಹಾಗು ಮುಂದಿನ ಕ್ರಮಕ್ಕಾಗಿ:

1. ಮಾನ್ಯ ರಾಜ್ಯ ಆಯುಕ್ತರು(ಸ್ಕೌಟ್ಸ್)(ಗೈಡ್ಸ್)(ವ.ಸಂ), ಭಾ.ಸ್ಕೌ & ಗೈ, ಕರ್ನಾಟಕ
2. ಸಂಬಂಧಪಟ್ಟ ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ & ಗೈ, ಕರ್ನಾಟಕ
3. ಸಂಬಂಧಪಟ್ಟ ಜಿಲ್ಲಾ ತರಬೇತಿ ಆಯುಕ್ತರು (ಗೈ & ಸ್ಕೌ), ಭಾ.ಸ್ಕೌ & ಗೈ, ಕರ್ನಾಟಕ
4. ಸಂಬಂಧಪಟ್ಟ ಜಿಲ್ಲಾ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/ ಡಿ.ಓ.ಟಿ/ಜಿಲ್ಲಾ ಸಂಘಟಕರು/ ಎಸ್.ಜಿ.ವಿ/ಎಸ್.ಜಿ.ಎರವರಿಗೆ.
5. ವಾರ್ಡನ್, ಡಾ॥ ಅನಿಬೆಸಿಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ
6. ಲೆಕ್ಕ ಪತ್ರ ವಿಭಾಗ.
7. ಕಛೇರಿ ಪ್ರತಿ.